


# ಬಯ್ಗುಳದಿಂದ ಅನಾರೋಗ್ಯ

ಪತಿ ಅಥವಾ ಸಂಗಾತಿಯಿಂದ ಬಯ್ಗುಳ ತಿನ್ನುವ ಮಹಿಳೆಯರು ವಿವಿಧ ಆರೋಗ್ಯ ಸಮಸ್ಯೆಗಳಿಂದ ಬಳಲುವುದು ಅಧ್ಯಯನದಿಂದ ತಿಳಿದುಬಂದಿದೆ. ಈ ಬಗ್ಗೆ ಅಮೆರಿಕದಲ್ಲಿ ಸಮೀಕ್ಷೆ ನಡೆಸಲಾಗಿದೆ.

ಪತಿಯಿಂದ ಹಿಂಸೆ ಅನುಭವಿಸುವ ಮಹಿಳೆಯರು ಹಿಂಸೆ ಅನುಭವಿಸದ ಮಹಿಳೆಯರಿಗಿಂತ ಖಿನ್ನತೆ, ಲೈಂಗಿಕ ಕಾಯಿಲೆಯಿಂದ ಬಳಲುವ ಸಾಧ್ಯತೆ ಆರು ಪಟ್ಟು ಅಧಿಕ. ಇದಲ್ಲದೆ ಹೊಟ್ಟೆನೋವು, ಎದೆನೋವು, ತಲೆನೋವು, ಆಮ್ಲೀಯತೆ, ಮೂತ್ರವ್ಯೂಹದ ಸೋಂಕು ಹಾಗೂ ಋತುಸ್ರಾವದಲ್ಲಿ ಏರುಪೇರು ಅನುಭವಿಸುವರು. ಹೀಗಾಗಿ ಅವರ ಆರೋಗ್ಯ ಸಮಸ್ಯೆಗಳಿಗೆ ಔಷಧ ನೀಡುವ ಮೊದಲು ಮಾನಸಿಕ ಹಾಗೂ ದೈಹಿಕ ಹಿಂಸೆಯ ಕುರಿತು ವೈದ್ಯರು ವಿಶ್ಲೇಷಿಸಬೇಕಾಗುತ್ತದೆ.

**ಅಧಿಕ ಮೀನು ಸೇವನೆಯಿಂದ ಮಧುಮೇಹ:**

ವಾರಕ್ಕೆ ಒಂದೆರಡು ಬಾರಿ ಮೀನು ಸೇವನೆ ಹೃದ್ರೋಗದಿಂದ ದೂರ ಇರಲು ಒಳ್ಳೆಯ ಮಾರ್ಗ. ಆದರೆ ಮಧುಮೇಹ ಇರುವವರು ಮೀನು ಸೇವಿಸಿದರೆ ರಕ್ತದಲ್ಲಿನ ಸಕ್ಕರೆ ಅಂಶ ಅಧಿಕವಾಗುವುದು ಪತ್ತೆಯಾಗಿದೆ.

ಮೀನಿನಲ್ಲಿರುವ ಅಧಿಕ ಮಟ್ಟದ ಒಮೆಗಾ-3 ಫ್ಯಾಟಿ ಆ್ಯಸಿಡ್‌ನಿಂದ ಮಧುಮೇಹ ಬರುವ ಸಾಧ್ಯತೆಯೂ ಜಾಸ್ತಿ. ವಾರಕ್ಕೆ ಮೂರಕ್ಕಿಂತ ಅಧಿಕ ಬಾರಿ ಮೀನು ಸೇವಿಸುವವರಲ್ಲಿ ಅಧ್ಯಯನ ನಡೆಸಿದಾಗ ಈ ಅಂಶ ಪತ್ತೆಯಾಗಿದೆ.

**ಮಗು ಬೇಕಾದರೆ ಮದ್ಯದಿಂದ ದೂರವಿರಿ:**

ಪ್ರನಾಳ ಶಿಶು (ಇನ್ ವಿಟ್ರೊ ಫರ್ಟಿಲೈಜೇಶನ್) ಮೂಲಕ ಗರ್ಭ ಧರಿಸ ಬಯಸುವವರು ಮದ್ಯ ಸೇವನೆಯಿಂದ ದೂರ ಇರುವುದು ಒಳಿತು. ವಾರಕ್ಕೆ ಅರ್ಧ ಬಾಟಲ್ ವೈನ್ ಸೇವಿಸುವ ದಂಪತಿ ನೈಸರ್ಗಿಕವಾಗಿ ಮಗು ಪಡೆಯುವ ಸಾಧ್ಯತೆ ಶೇ 18ರಷ್ಟು ಕಡಿಮೆ. ಜೊತೆಗೆ ಗರ್ಭ ಧರಿಸಿದರೂ ಜೀವಂತವಾಗಿ ಶಿಶು ಪಡೆಯುವ ಸಂಭವ ಶೇ 14ರಷ್ಟು ಕಡಿಮೆಯಾಗುತ್ತದೆ.

ವೈನ್ ಸೇವನೆ ಪ್ರಮಾಣ ಒಂದು ಬಾಟಲ್‌ಗೆ ಏರಿದರೆ ಪ್ರನಾಳ ಶಿಶು ಮೂಲಕ ಮಗು ಪಡೆಯುವ ಸಂಭವವೂ ಕಡಿಮೆ ಎನ್ನುತ್ತದೆ ಸಂಶೋಧನೆ

**ವಾಯು ಮಾಲಿನ್ಯದಿಂದ ತಲೆಶೂಲೆ**

ವಾಯು ಮಾಲಿನ್ಯ ಅಧಿಕ ಪ್ರಮಾಣದಲ್ಲಿದ್ದರೆ ತಲೆನೋವಿಗೆ ಕಾರಣವಾಗುತ್ತದೆ. ಮಾಲಿನ್ಯ ಶ್ವಾಸಕೋಶದ ತೊಂದರೆಗೆ ಕಾರಣ ಎನ್ನುವುದು ಸಾಬೀತಾಗಿದೆ. ಆದರೆ ಈಗ ಇದು ತಲೆನೋವಿಗೂ ಕಾರಣ ಎಂಬುದು ಪತ್ತೆಯಾಗಿದೆ.

ಮಾಲಿನ್ಯದಿಂದ ಗಾಳಿಯಲ್ಲಿ ನೈಟ್ರೋಜನ್, ಸಲ್ಫರ್ ಡೈಆಕ್ಸೈಡ್, ಕಾರ್ಬನ್ ಮಾನಾಕ್ಸೈಡ್ ಮೊದಲಾದ ಅಂಶಗಳ ಮಟ್ಟ ಏರುತ್ತದೆ. ಇದರಿಂದ ಅರೆ ತಲೆಶೂಲೆ ಕೂಡಾ ಬರುವ ಸಾಧ್ಯತೆ ಹೆಚ್ಚು. ಅರೆ ತಲೆಶೂಲೆಗೆ ಮುಖ್ಯವಾದ ಕಾರಣಗಳೂ ನರವ್ಯೂಹ ಹಾಗೂ ರಕ್ತ ಪರಿಚಲನೆಯಲ್ಲಾಗುವ ವ್ಯತ್ಯಾಸ. ಸಲ್ಫರ್ ಡೈಆಕ್ಸೈಡ್ ಮತ್ತು ಓಜೋನ್ ಪದರದ ನಾಶ ಈ ಎರಡೂ ಅಂಶಗಳ ಮೇಲೆ ಪರಿಣಾಮ ಬೀರುತ್ತವೆ ಎನ್ನುತ್ತಾರೆ ಸಂಶೋಧಕರು. ಹೀಗಾಗಿ ಮಾಲಿನ್ಯ ಜಾಸ್ತಿ ಇದ್ದರೆ ತಲೆನೋವು ತೊಂದರೆ ಇರುವವರು ಆದಷ್ಟು ಮನೆಯೊಳಗೆ ಇರುವುದು ಒಳಿತು ಎನ್ನುತ್ತಾರೆ.

**ಒತ್ತಡವಿದ್ದರೆ ಗರ್ಭಧಾರಣೆ ಅಸಾಧ್ಯ**

ಆರಾಮವಾಗಿದ್ದು ವಿಶ್ರಾಂತಿ ತೆಗೆದುಕೊಳ್ಳುವುದರಿಂದ ಗರ್ಭ ಧರಿಸಲು ಯತ್ನಿಸುತ್ತಿರುವ ಮಹಿಳೆಯರಲ್ಲಿ ಗರ್ಭ ಧರಿಸುವ ಅವಕಾಶಗಳು ಅಧಿಕ ಎನ್ನುತ್ತದೆ ಅಧ್ಯಯನ. ಇಂತಹ ಮಹಿಳೆಯರಿಗೆ ಮನೆಯವರು ಹಾಗೂ ಸ್ನೇಹಿತರು ಚಿಂತೆ ಮಾಡುವುದು ಬಿಟ್ಟು ಆರಾಮವಾಗಿರು ಎಂದು ಉಪದೇಶ ಕೊಡುವುದು ಜಾಸ್ತಿ. ಈ ಸಲಹೆ ಗರ್ಭ ಧರಿಸುವ ಅವಕಾಶವನ್ನು ಶೇ 160ರಷ್ಟು ಹೆಚ್ಚಿಸುತ್ತದೆ ಎನ್ನುತ್ತದೆ ಅಧ್ಯಯನ.

ಒತ್ತಡದಿಂದ ಐವಿಎಫ್ ಕೂಡಾ ಫಲಕಾರಿಯಾಗುವ ಸಾಧ್ಯತೆ ಕಡಿಮೆ. ಹೀಗಾಗಿ ಧ್ಯಾನ, ಯೋಗದತ್ತ ಮನಸ್ಸು ಕೊಟ್ಟು ಒತ್ತಡ ಕಡಿಮೆ ಮಾಡಿಕೊಳ್ಳುವಂತೆ ಈಗೀಗ ವೈದ್ಯರು ಸಲಹೆ ನೀಡುತ್ತಿದ್ದಾರೆ.

**ಸಾವಿನ ಸಂಖ್ಯೆ:**

ವಿಶ್ವದಲ್ಲಿ ಪ್ರತಿ ವರ್ಷ ಮಕ್ಕಳಲ್ಲಿ ಅಪೌಷ್ಟಿಕತೆ, ಅಸುರಕ್ಷಿತ ಲೈಂಗಿಕತೆ, ಮದ್ಯ ಸೇವನೆ, ಸ್ವಚ್ಛತೆಯ ಕೊರತೆ, ಅಧಿಕ ರಕ್ತದೊತ್ತಡದಿಂದ 60 ದಶಲಕ್ಷ ಮಂದಿ 60 ವರ್ಷಗಳಿಗಿಂತ ಮುನ್ನವೇ ಸಾವಿಗೀಡಾಗುತ್ತಿದ್ದಾರೆ. ಬಡ ರಾಷ್ಟ್ರಗಳಲ್ಲಿ ಪೌಷ್ಟಿಕ ಆಹಾರದ ಕೊರತೆಯಿಂದಾಗಿ ಸಾವು ಸಂಭವಿಸಿದರೆ, ಸಿರಿವಂತ ದೇಶಗಳಲ್ಲಿ ಕೊಬ್ಬಿನಂಶ ಹಾಗೂ ಅತಿಯಾದ ತೂಕದಿಂದ ಮೃತಪಡುವವರ ಸಂಖ್ಯೆ ಜಾಸ್ತಿ.

■ ಸುಧಿ








"ಸ್ವರ್ಣ ಭಸ್ಮ" ದೊಂದಿಗೆ ಶಕ್ತಿಗೊಳಿಸಲಾಗಿದೆ.

ವಿಟಾ-ಎಕ್ಸ್ ಗೋಲ್ಡ್ ಪ್ಲಸ್

**ಸಿಡೆನಫಿಲ್ ಸಿಟ್ರೇಟ್ (ವಯಾಗ್ರ)** ಅನ್ನು ಅಪಾರ ನಿರೀಕ್ಷಣೆಗಳೊಂದಿಗೆ ಮಾರುಕಟ್ಟೆಗೆ ತರಲಾಯಿತು ಆದರೆ ಅದು ನಿಮಿರುವಿಕೆ ಅಪಸಾಮಾನ್ಯದ ಒಂದೇ ಒಂದು ಭಾಗದಲ್ಲಿ ಮಾತ್ರ ಪರಿಹಾರ ಒದಗಿಸುವ ಹಾಗೂ ತಾತ್ಕಾಲಿಕ ಕೂಡ ಆದುದರಿಂದ **ವಿಟಾ ಎಕ್ಸ್ ಗೋಲ್ಡ್ ಪ್ಲಸ್** ಬಳಕೆದಾರರನ್ನು ಆಕರ್ಷಿಸಲು ಸಾಧ್ಯವಾಗಲಿಲ್ಲ... ಹೀಗಿರುವಾಗ ವಿಟಾ ಎಕ್ಸ್ ಗೋಲ್ಡ್ ಪ್ಲಸ್ ಮನಸ್ಸು ಹಾಗೂ ದೇಹದ ಲೈಂಗಿಕ ಅಪಸಾಮಾನ್ಯ ಕ್ರಿಯೆಯನ್ನು **ಸಮಗ್ರತಾ ಸಿದ್ಧಾಂತದ ರೀತಿಯಲ್ಲಿ ಸರಿಪಡಿಸುತ್ತದೆ...**

ರಾಷ್ಟ್ರದ ಪ್ರಪ್ರಥಮವಾದ ಚೈತನ್ಯವರ್ಧಕವಾದ **ಬೈದ್ಯನಾಥ್ ವಿಟಾ ಎಕ್ಸ್ ಗೋಲ್ಡ್ ಪ್ಲಸ್** ಲೈಂಗಿಕ ಅಪಸಾಮಾನ್ಯ ಕ್ರಿಯೆಯಿಂದ ಬಳಲುತ್ತಿರುವ ಪುರುಷರಿಗೆ ವರದಾನವಾಗಿ ಪರಿಣಮಿಸಿತು. ಇದು ಕಳೆದ ಎರಡು ದಶಕಗಳಿಂದಲೂ ಗಿಡ ಮೂಲಿಕೆ ಕಾಮೋತ್ತೇಜಕಗಳ ಪ್ರವರ್ಗದಲ್ಲಿ ಅಗ್ರಗಣ್ಯತೆ ನಿರೂಪಿಸಿದೆ.

ಇದು **ಸಫೇದ್ ಮುಸಲಿ, ಅಶ್ವಗಂಧ, ಕಾಂಚ್ ಬೀಚ್, ಶತವಾರಿ ಇತ್ಯಾದಿ** ಜೊತೆಗೆ ಮೌಲ್ಯಭರಿತ **"ಸ್ವರ್ಣ-ಭಸ್ಮ"**ವನ್ನು ಒಳಗೊಂಡಿರುವುದರಿಂದ ಹೆಚ್ಚು ವೀರ್ಯವತ್ತಾಗಿ ಹಾಗೂ ಹೆಚ್ಚು ಫಲಪ್ರದತೆಯಾಗಿ ಕಾರ್ಯನಿರ್ವಹಿಸುತ್ತದೆ. ವಿಟಾ ಎಕ್ಸ್ ಗೋಲ್ಡ್ ಪ್ಲಸ್ ಅನ್ನು **ವಾಜಿಕರಣ್-ಆಯುರ್ವೇದದ ರಸಾಯನ ಹಾಗೂ ಕಾಮಸೂತ್ರದ ಆಧಾರದ** ವ್ಯಾಪಕ ಸಂಶೋಧನೆಯ ನಂತರ ಸೂತ್ರ ರೂಪಗೊಳಿಸಲಾಗಿದೆ. **ವಿಟಾ ಎಕ್ಸ್ ಗೋಲ್ಡ್ ಪ್ಲಸ್** ಶಕ್ತಿಶಾಲಿಯಾದ ಚೈತನ್ಯವರ್ಧಕವಾಗಿದ್ದು ದೇಹ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವುದರ ಜೊತೆಗೆ ಜಾಗೃತಿ ಹಾಗೂ ಅಪೇಕ್ಷೆಯ ಶೃಂಗ ಮಟ್ಟಕ್ಕೆ ನಿಮ್ಮನ್ನು ಕೊಂಡೊಯ್ಯಲು ನಿಮ್ಮ ಅಂತರಾಳದ ಇಂದ್ರೀಯಗಳನ್ನು ಪ್ರೇರೆಪಿಸುತ್ತದೆ. ಇಂತಹ ಮಾನಸಿಕ ಹಾಗೂ ದೈಹಿಕ ಸ್ಥಿತಿಯಲ್ಲಿ ಲೈಂಗಿಕ ಸಂಪರ್ಕವು ಸುದೀರ್ಘವು, ಆನಂದದಾಯಕವು ಹಾಗೂ ಖಾತರಿಯುತ ತೃಪ್ತಿಯನ್ನುಂಟು ಮಾಡುತ್ತದೆ. ವಿಟಾ ಎಕ್ಸ್ ಗೋಲ್ಡ್ ಪ್ಲಸ್ ಪುರಷರ ಬಂಜೆತನ ಮತ್ತು ಲೈಂಗಿಕ ಅಪಸಾಮಾನ್ಯ ಕ್ರಿಯೆಯ ಚಿಕಿತ್ಸೆಯಲ್ಲಿ **ಪರಿಣಾಮಕಾರಿಯಾಗಿದೆ.**



**100% ಆಯುರ್ವೇದಿಕ್ ಹಾಗೂ ಅಪಾಯ ರಹಿತ**

ನಂ.1 ಉತ್ಪನ್ನಗಳ ವರ್ಗದಲ್ಲೇ!
ಅಡ್ಡಪರಿಣಾಮಗಳಿರುವುದಿಲ್ಲ.